ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-5, March- April 2025, Pp. 1-9
©*IIMRD*, Mysuru
IIMRD JOURNALS
www.iimrd.com

# ಕುವೆಂಪು ಅವರ ಆಯ್ದ ನಾಟಕಗಳಲ್ಲಿ ಶೋಷಣೆ ಮತ್ತು ಪ್ರತಿರೋಧದ ನೆಲೆಗಳು

**ಡಾ. ಹೆಚ್.ಎಂ. ಮಲ್ಲಿಕಾರ್ಜುನ**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಕ್ರೈಸ್ಟ್ ಅಕಾಡೆಮಿ ಇನ್ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ಡ್ ಸ್ಟಡೀಸ್,
ಬೇಗೂರು–ಕೊಪ್ಪ ರಸ್ತೆ, ಬೆಂಗಳೂರು.

**ಸಾರಾಂಶ: (Abstract)**

*ಕುವೆಂಪು ಅವರು ಈ ನಾಡಿನ ಶ್ರೇಷ್ಠ ಕವಿಗಳು, ದಾರ್ಶನಿಕರು, ಮೀಮಾಂಸಕರು, ಸಂಸ್ಕೃತಿ ವಿಶ್ಲೇಷಕರಾಗಿದ್ದಾರೆ. ಇವರ ಕೊಡುಗೆಯನ್ನು ನಾಡಿಗೆ ಮಾತ್ರ ಸೀಮಿತವಾಗಿಸದೇ ಭಾರತಕ್ಕೆ ಅನ್ವಯಿಸಬಹುದು. ಭಾರತೀಯ ಸಾಹಿತ್ಯ ಪರಂಪರೆಯು ಶ್ರೀಮಂತವಾದುದಾಗಿದೆ. ಎಲ್ಲಾ ಭಾಷೆಯ ಸಾಹಿತ್ಯಕ ಕೊಡುಗೆಯಿಂದ ನಿರಂತರವಾಗಿ ಬೆಳೆದುಬಂದಿದೆ. ಅಂತೆಯೇ ಕನ್ನಡ ಸಾಹಿತ್ಯದಲ್ಲಿ ಅನನ್ಯವಾಗಿ ಕೃತಿ ರಚನೆ ಮಾಡಿದ ಕುವೆಂಪು ಅವರ ಶೈಲಿ ಮನನೀಯವಾದುದಾಗಿದೆ. ಕುವೆಂಪು ಅವರು ಕಾವ್ಯ, ಕಾದಂಬರಿ, ಮಹಾಕಾವ್ಯ, ಖಂಡಕಾವ್ಯಗಳು, ಮೀಮಾಂಸೆ, ವೈಚಾರಿಕ ಬರಹಗಳೊಂದಿಗೆ ನಾಟಕ ಸಾಹಿತ್ಯದಲ್ಲಿಯೂ ತಮ್ಮದೇ ಛಾಪನ್ನು ಮೂಡಿಸಿದ್ದಾರೆ. ಪ್ರಸ್ತುತ ಈ ಸಂಶೋಧನಾ ಪ್ರಬಂಧದಲ್ಲಿ ಕುವೆಂಪು ಅವರ ಆಯ್ದ ನಾಟಕಗಳಲ್ಲಿ ಶೋಷಣೆ ಮತ್ತು ಪ್ರತಿರೋಧದ ನೆಲೆಗಳು ಎಂಬ ವಿಷಯ ಕುರಿತು ಚರ್ಚಿಸಲಾಗುವುದು.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ನಾಟಕ ಸಾಹಿತ್ಯ, ಕುವೆಂಪು, ಜಲಗಾರ, ಶೂದ್ರತಪಸ್ವಿ, ಬೆರಳ್ಗೆ–ಕೊರಳ್, ಕಾನೀನ.

## ಪೀಠಿಕೆ

ಭಾರತ ಹೇಗೆ ವಿಭಿನ್ನ ಸಂಸ್ಕೃತಿ ಪರಂಪರೆಯನ್ನು ಒಳಗೊಂಡು ಬೆಳೆದಿದೆಯೋ ಅಂತೆಯೇ ಶೋಷಣೆ, ದೌರ್ಜನ್ಯಗಳಿಗೂ ಆಗರವಾಗಿದ್ದ ಸಂಗತಿ ಸುಳ್ಳಲ್ಲ, ಸ್ವಾತಂತ್ರ್ಯ ಪೂರ್ವದಲ್ಲಿ ಜನಿಸಿದ ಕುವೆಂಪು ಅವರ ಮುಂದೆ, ಬ್ರಿಟಿಷರ ದಾಸ್ಯ ಒಂದು ಸವಾಲಾದರೆ, ತಲೆತಲಾಂತರದಿಂದ ಬಂದಿರುವ ಜಾತೀಯತೆ, ಮೇಲು–ಕೀಳು ಭಾವ, ಸ್ತ್ರೀ–ಪುರುಷ ಭೇದಗಳನ್ನು ಅಳಿಸಿಹಾಕುವುದು ಮತ್ತೊಂದು ಸವಾಲಾಗಿತ್ತು. ಅವರ ಸಾಹಿತ್ಯವನ್ನು ಓದುಗರು ಪುನರಾವಲೋಕನ ಮಾಡುತ್ತಾ ಸಾಗಿದರೆ ಉತ್ತಮ ವ್ಯಕ್ತಿತ್ವ ಸಾಧ್ಯವೆಂಬುದು ಸಾಬೀತಾಗಿದೆ.

ರಾಘವಾಂಕ ತನ್ನ ಹರಿಶ್ಚಂದ್ರ ಕಾವ್ಯದಲ್ಲಿ ಉಲ್ಲೇಖಿಸಿದ ಸಾಲುಗಳು ಗಮನಾರ್ಹವಾಗಿವೆ. "ಜನಬದುಕಲೆಂದು ಕಾವ್ಯವಂ ಪೇಳ್ದೆ" ಕಾವ್ಯ ಜನಕ್ಕಾಗಿ, ಜನರಿಗೋಸ್ಕರ ಬರೆಯಲ್ಪಡಬೇಕೇ ಹೊರತು

*Please cite this article as:* ಮಲ್ಲಿಕಾರ್ಜುನ ಹೆಚ್.ಎಂ. (2025). ಕುವೆಂಪು ಅವರ ಆಯ್ದ ನಾಟಕಗಳಲ್ಲಿ ಶೋಷಣೆ ಮತ್ತು ಪ್ರತಿರೋಧದ ನೆಲೆಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(5). ಪು.ಸಂ.* 1–9

ಯಾವುದೋ ಒತ್ತಡ ಮತ್ತು ಪ್ರಭುತ್ವವನ್ನು ಮೆಚ್ಚಿಸುವಂತಾಗಬಾರದು. ಆ ನಿಟ್ಟಿನಲ್ಲಿ ವಚನ ಸಾಹಿತ್ಯ ಜನಸಾಮಾನ್ಯರನ್ನು ಕೇಂದ್ರೀಕರಿಸಿಕೊಂಡು ಬಂದ ಕನ್ನಡದ ಮೊದಲ ಸಾಹಿತ್ಯಕ ಚಳುವಳಿ ಎಂದೇ ಗುರುತಿಸಬಹುದು. ಅಕ್ಷರಶಃ ಪ್ರಜಾಪ್ರಭುತ್ವ ಎಂಬುದಕ್ಕೆ ಬಸವಾದಿ ಶರಣರು ದುಡಿದಿದ್ದರು. ಎಷ್ಟು ವೇಗವಾಗಿ ಮುನ್ನೆಲೆಗೆ ಬಂದು ಜನರನ್ನು ಪರಿವರ್ತನೆ ಮಾಡಿತ್ತೋ ಅಷ್ಟೇ ಬೇಗ ಕಲ್ಯಾಣದ ಶರಣರನ್ನೆಲ್ಲಾ ಚಲ್ಲಾಪಿಲ್ಲಿಯಾಗುವಂತೆ ಮಾಡಿದುದು ಪುರೋಹಿತಶಾಹಿಗಳ ಕುತಂತ್ರವೆಂಬುದೇ ಸರಿ. 20ನೇ ಶತಮಾನದಲ್ಲಿಯೂ ಮುಂದುವರೆದಿದ್ದ ಈ ದರಿದ್ರ ಅಸ್ಪೃಶ್ಯ ಆಚರಣೆಗಳನ್ನು ಕಿತ್ತೊಗೆಯಲು ಪಣತೊಟ್ಟು ಗಟ್ಟಿಯಾದ ಹೆಜ್ಜೆ ಇಟ್ಟು, ಸಂಪ್ರದಾಯವಾದಿಗಳಿಗೆ ನಿಷ್ಠೂರಿಯಾದರೂ ಹಿಂಜರಿಯದೇ, ಜನಮುಖಿಯಾಗಿ ಸಾಹಿತ್ಯ ರಚಿಸಿ ದೈತ್ಯಪ್ರತಿಭೆಯಾಗಿ ಬೆಳೆದವರು ಕುವೆಂಪು. ತಮ್ಮ ಸಾಹಿತ್ಯದಲ್ಲಿನ ಸಮಾನತೆ, ವೈಚಾರಿಕತೆ, ಮೂಢನಂಬಿಕೆಯ ವಿರೋಧ ಇಂತಹ ವಿಚಾರಗಳಿಂದಲೇ ಜನಮನ್ನಣೆ ಗಳಿಸಿಕೊಂಡ ಕುವೆಂಪು ಅವರ ಅನೇಕ ಸಾಹಿತ್ಯ ಕೃತಿಗಳಿವೆ. ಆದರೆ ಈ ಸಂಶೋಧನಾ ಲೇಖನದ ವ್ಯಾಪ್ತಿಗೆ ಜಲಗಾರ, ಶೂದ್ರತಪಸ್ವಿ, ಬೆರಳ್ಗೆ – ಕೊರಳ್, ಕಾನೀನ ಈ ನಾಲ್ಕು ನಾಟಕಗಳನ್ನು ಆಯ್ದುಕೊಂಡು ಅಲ್ಲಿನ ಸನ್ನಿವೇಶಗಳು ಹೇಗೆ ಶೋಷಣೆ ವಿರುದ್ಧ ಪ್ರತಿರೋಧವನ್ನು ಒಡ್ಡಿವೆ ಎಂಬುದನ್ನು ವಿಶ್ಲೇಷಿಸಲಾಗಿದೆ, ಹಾಗೂ ಅದು ಪ್ರಸ್ತುತ ದಿನಮಾನಕ್ಕೆ ಹೇಗೆ ಸಹಾಯಕವಾಗುತ್ತದೆ ಎಂಬ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ. "ಪ್ರಸ್ತುತ ಸಂದರ್ಭದಲ್ಲಿ ವರ್ಣ, ವರ್ಗದ ಅಸಮಾನತೆಗಳು ಇನ್ನಷ್ಟು ಗೋಜಲು ಗೋಜಲುಗಳಾಗಿ ತಲೆಯೆತ್ತಿವೆ. ಇಂಥ ಅಸಮಾನತೆಯಗಳ ಬಗೆಗೆ ಮುಖಾಮುಖಿಯಾಗುವ ಶೂದ್ರ ತಪಸ್ವಿ, ಬೆರಳ್‌ಗೆ ಕೊರಳ್, ಜಲಗಾರ ನಾಟಕಗಳ ಮರು ಓದು ಪ್ರಸ್ತುತವಾಗಬಲ್ಲದೆಂದು ನಂಬಿದ್ದೇನೆ. ಅಸಮಾನತೆಗಳ ಬಗೆಗೆ ನಿರಂತರವಾಗಿ ಪ್ರಜ್ಞಾಪೂರ್ವಕವಾಗಿ ಪ್ರತಿಭಟನೆಯನ್ನು ತೋರಿದ ಕುವೆಂಪು ಅವರು ರಾಜಕೀಯ, ಸಾಂಸ್ಕೃತಿಕ ಚಿಂತಕರಾಗಿ, ಕವಿಯಾಗಿ, ಮನೋವಿಜ್ಞಾನಿಯಾಗಿ ಜನಮನವನ್ನು ಮುಟ್ಟಿದ್ದಾರೆ. ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಪ್ರಭಾವ ಮುದ್ರೆಯನ್ನು ಒತ್ತಿದ್ದಾರೆ. ಅವರು ಕೊಟ್ಟ ವಿಚಾರಕ್ರಾಂತಿಯ ಕರೆ ಸಾವಿರಾರು ಜನರ ಹೃದಯ ದೀವಿಗೆಯನ್ನು ಹೊತ್ತಿಸಿದೆ. ಮುನ್ನಡೆಸಿದೆ."[1] ನವೋದಯದ ಕಾಲಘಟ್ಟದಲ್ಲಿ ಹಲವಾರು ಕವಿಗಳು ಬರುತ್ತಾರಾದರೂ, ಕುವೆಂಪು ಅವರಂತೆ ಪರಂಪರೆಯಲ್ಲಿರುವ ದೋಷವನ್ನು ತಿದ್ದಿ ಅದನ್ನು ಪ್ರಸ್ತುತಕ್ಕೆ ಹೊಂದಿಸಿರುವವರ ಸಂಖ್ಯೆ ವಿರಳ. ಕುವೆಂಪು ಅವರ ನಾಟಕಗಳ ಕೇಂದ್ರಬಿಂದು ಅಲಕ್ಷಿತ ಶೋಷಿತ ಶೂದ್ರ ಸಮುದಾಯವೇ ಆಗಿರುವುದು ಕಂಡುಬರುತ್ತದೆ. ಸಮಾಜದಲ್ಲಿ ಬಲಿಷ್ಠನೆನ್ನಿಸಿಕೊಂಡವನು ಕಟ್ಟಕಡೆಯ ವ್ಯಕ್ತಿಯನ್ನು ತುಳಿದು ಬದುಕಿರುವ ಇತಿಹಾಸವನ್ನು ಅವಲೋಕಿಸಿ ಆತನನ್ನು ಮುನ್ನೆಲೆಗೆ ತರುವ ಶಪಥದೊಂದಿಗೆ ಸಾಹಿತ್ಯ ಸೇವೆಗೈದಿದ್ದಾರೆ.

ಜಲಗಾರ ನಾಟಕದಲ್ಲಿ ಭೂದೇವಿ, ಶಿವ, ಜಲಗಾರ, ರೈತ, ಕಬ್ಬಿಗ, ಯುವಕ, ತಿರುಕ, ಭಟ್ಟ, ಬಾಲಕರು, ಹಳ್ಳಿಯ ಹುಡುಗಿ, ಇಬ್ಬರು ಪಾರ್ವರು, ಇಬ್ಬರು ತರುಣರು ಪಾತ್ರಗಳು ಕಂಡು ಬರುತ್ತವೆಯಾದರೂ ಓದುಗರ ಮನವನ್ನು ಸೆಳೆಯುವುದು ಕಾಯಕವೇ ಕೈಲಾಸವೆಂದುಕೊಂಡು ಊರಿನ ಕಸ ಗುಡಿಸುತ್ತಾ ಕರ್ತವ್ಯಮಗ್ನನಾಗಿರುವ ಜಲಗಾರ. ಸಾಮಾಜಿಕ ಸ್ಥಾನಮಾನಗಳಿಂದ ವಂಚಿತನಾದವನು. ಹೀಗಿದ್ದಾಗಿಯೂ ತಾನಿರುವಲ್ಲಿಗೆ ಶಿವನನ್ನು ಕರೆಸಿಕೊಂಡುದು ಇಲ್ಲಿ ಮಹತ್ವದ ಸಂಗತಿಯಾಗಿದೆ. ಯಾವ ಬ್ರಾಹ್ಮಣ್ಯದ

ಶೋಷಣೆಯನ್ನು ಕಣ್ಣಾರೆ ಕಂಡಿದ್ದರೋ ಅದರ ವಿರುದ್ಧ ಸಾಹಿತ್ಯಕ ಸಮರ ಸಾರಿ ಜಯಶೀಲರಾದವರು ಕುವೆಂಪು ಅವರು. ಇದರೊಂದಿಗೆ ಪುರೋಹಿತಶಾಹಿಗಳ ವಿರೋಧವನ್ನು ಕಟ್ಟಿಕೊಳ್ಳುವ ಸನ್ನಿವೇಶ ಉಂಟಾಗುತ್ತದೆ. ಪುರೋಹಿತಶಾಹಿ ಎಂದರೆ ಬ್ರಾಹ್ಮಣರು ಎಂಬ ಪರಿಕಲ್ಪನೆ ಬಂದರೂ ಸಹ ಕುವೆಂಪು ಅವರು ಅದಕ್ಕೆ ಸ್ಪಷ್ಟತೆಯನ್ನು ನೀಡಿದ್ದಾರೆ. **"**ನಮ್ಮ ದೇಶದಲ್ಲಿ ಪುರೋಹಿತಶಾಹಿ, ಪುರೋಹಿತ ವರ್ಗ ಎಂದರೆ ಸಾಮಾನ್ಯವಾಗಿ ಬ್ರಾಹ್ಮಣ ವರ್ಗ ಅಂತ. ಆದರೆ ವಾಸ್ತವವಾಗಿ ಪರೋಹಿತಶಾಹಿ, ಪುರೋಹಿತ ವರ್ಗವೆಂದರೆ ಬರೀ ಬ್ರಾಹ್ಮಣ ವರ್ಗವಲ್ಲ, ಹಿಂದೂಗಳಲ್ಲಿ ಬ್ರಾಹ್ಮಣ ವರ್ಗವಾಗುತ್ತದೆ. ಕ್ರೈಸ್ತರಲ್ಲೂ ಪುರೋಹಿತಶಾಹಿ ಇದೆ. ಅಲ್ಲಿ ಅದನ್ನು ಯಾವ ಜಾತಿ ಎಂದು ಕರೆಯುವುದು? ಮುಸ್ಲಿಮರಲ್ಲೂ ಪುರೋಹಿತಶಾಹಿ ಇದೆ. ಬೌದ್ಧರಲ್ಲೂ ಪುರೋಹಿತಶಾಹಿ ಇದೆ. ಎಲ್ಲಾ ಮತಗಳಲ್ಲೂ ಪುರೋಹಿತಶಾಹಿ ಇದ್ದೇ ಇದೆ. ಯುರೋಪಿನಲ್ಲಿ ನಡೆದ ಹೋರಾಟ ಒಂದು ಜಾತಿಯ ಮೇಲಲ್ಲ. ಅದು ಒಂದು ಪುರೋಹಿತಶಾಹಿಯ ಮೇಲೆ ನಡೆಯಿತು. ಇಂದಿಗೂ ನಡೆಯುತ್ತಲೇ ಇದೆ.**"**[2] ಜಲಗಾರ ನಾಟಕದಲ್ಲಿ ಪುರೋಹಿತಶಾಹಿಯ ಛಾಯೆಯಂತೆ ದೇವಾಲಯ, ಅಲ್ಲಿನ ಪಾರ್ವರು ಕಂಡುಬರುತ್ತಾರೆ. ಜಲಗಾರನೂ ಈ ವ್ಯವಸ್ಥೆಯನ್ನು ಒಪ್ಪಿಕೊಂಡ ಶೂದ್ರನಾಗಿ ಈ ನಾಟಕದಲ್ಲಿ ಬಿಂಬಿತವಾಗಿದ್ದಾನೆ. ಹೋಗುವ ತವಕ ಇದ್ದರೂ ಸಹಾ ಜೋಯಿಸರು ದೇಗುಲದ ಬಳಿಗೆ ಸೇರಿಸದೇ ಇರುವ ಕಾರಣದಿಂದ ಕಸಗುಡಿಸುವ ಕರ್ತವ್ಯದಲ್ಲಿ ಮಗ್ನನಾದ ರೀತಿ ಆತನ ಕಾಯಕನಿಷ್ಠೆಯನ್ನು ಎತ್ತಿ ತೋರುತ್ತದೆ. ಇದೇ ಸಂದರ್ಭದಲ್ಲಿ ಪ್ರವೇಶಿಸುವ ರೈತ, ನೇಗಿಲ ಯೋಗಿಯು ನಾನು, ಮಣ್ಣಿನ ಭೋಗಿಯು ನಾನು ಎಂದು ಹಾಡಿಕೊಳ್ಳುತ್ತಾ ಸಾಗುತ್ತಿರುತ್ತಾನೆ. ಇದನ್ನು ಕಂಡ ಜಲಗಾರ ಎಲ್ಲಿಗೆ ಸಾಗುತ್ತಿರುವೆ ಎಂದು ಕೇಳಿದಾಗ

**ರೈತ** : **"**ಇಂದು ನಮ್ಮೂರ ಶಿವಗುಡಿಯ ಜಾತ್ರೆ ಬರುವುದಿಲ್ಲವೇ ನೀನು

**ಜಲಗಾರ** : ನನಗೇಕೆ ಶಿವಗುಡಿಯ ಜಾತ್ರೆ?
ಜೋಯಿಸರು ದೇಗುಲದ ಬಳಿಗೆನ್ನ ಸೇರಿಸರು.

**ರೈತ** : ದೂರದಲ್ಲಿಯೇ ನಿಂತು ಕೈ ಮುಗಿದು ಬಾ

**ಜಲಗಾರ** : ಕರ್ಮವಾರಾಧನೆ ಸೇವೆಯೇ ಪೂಜೆ
ನನ್ನ ಭಾಗಕ್ಕೆ ಪೊರಕೆ ಆರತಿ ಗುಡಿಸುವುದೇ
ನನ್ನ ದೇವರಪೂಜೆ
ಶಿವಗುಡಿಯ ಶಿವನು ಜೋಯಿಸರ ಶಿವನಂತೆ
ನನ್ನ ಶಿವ ಈ ಮಣ್ಣಿನಲ್ಲಿಹನು ನನ್ನ ಶಿವ
ಕೊಳೆತ ಕಸದೊಳಗಿಹನು
ನಾನೆಲ್ಲಿ ಸತ್ಕರ್ಮವೆಸಗುವೆನೊ
ಅಲ್ಲಿ ಮೈದೋರುವನು**"**[3]

ಕಾಯಕದಲ್ಲಿ ಸಂತೃಪ್ತಿ ಹೊಂದುತ್ತಿರುವ ಜಲಗಾರನಿಗೆ ಶಿವಗುಡಿಯ ಅವಶ್ಯಕತೆ ಇಲ್ಲ. ಅಂತೆಯೇ ಮುಂದುವರಿದು ಜಲಗಾರ ಭಾವಾವೇಶದಿಂದ, ಭಕ್ತಿಯಿಂದ ಹಾಡನ್ನು ಹಾಡುತ್ತಾನೆ. ಇದೇ ದಾರಿಯಲ್ಲಿ ಬರುತ್ತಿದ್ದ ಪಾರ್ವರು ಯಾರೋ ದಿವ್ಯಾತ್ಮನಿರಬೇಕು ಎಂದು ಪರಸ್ಪರರು ಚರ್ಚಿಸಿಕೊಂಡು ಬರುತ್ತಾ, ಜಲಗಾರನಿಗೆ ಎದಿರಾಗಿ ಯಾರು ಗಾಯನ ಮಾಡಿದ್ದು ಎಂದಾಗ ಜಲಗಾರ ನಾನೇ ಸ್ವಾಮಿ ಎಂದಾಗ ಪಾರ್ವರಿಗೆ ಕೋಪ ಬರುತ್ತದೆ.

*"ಅವನಂತೆ ಬರಿಯ ಸಟೆ*
*ಗಾನದೇವಿ ಹೀನ ಜಲಗಾರನನ್*
*ಒಲಿಯುವಳೆ? ಎಂದಿಗೂ ಇಲ್ಲ*
*ಶೂದ್ರರೊಳ್*
*ಕವಿವರ್ಯರುದಿಸುವರೆ? ಹುಟ್ಟುವರೆ ಪಂಡಿತರ್?*
*ಜನಿಸುವರೆ ಶಿಲ್ಪಿಗಳ್? ಗಾಯಕರ್? ಯೋಗಿಗಳ್*[4]

ಎಂದು ನುಡಿದ ಪಾರ್ವರ ಮಾತುಗಳನ್ನು ಕೇಳಿ ಜಲಗಾರ ಒಳಗೊಳಗೆ ನೊಂದುಕೊಂಡನು. ಇಂತಹ ಹಲವಾರು ಸಂಗತಿಗಳು ಜಲಗಾರನಿಗೆ ಎದುರಾದಾಗ ಆತ ಅದನ್ನು ಪ್ರಬಲವಾಗಿ ಎದುರಿಸಿದ್ದಾನೆ, ಕೆಲವೊಮ್ಮೆ ಅಪಮಾನಕ್ಕೆ ಒಳಗಾಗಿದ್ದಾನೆ. ಕಡೆಗೂ ಆತನಿಗೆ ಸತ್ಯದ ಅರಿವಾಗುತ್ತದೆ. ಶೂದ್ರರಾಗಿರುವ ನಮಗೆ ದೇವಾಲಯದ ಪ್ರವೇಶ ದೊರೆಯುವುದಿಲ್ಲ, ಜೊತೆಗೆ ಅದೊಂದು ಶೋಷಣೆಯ ಕೇಂದ್ರವೆಂದು ಭಾವಿಸಿಕೊಳ್ಳುತ್ತಾನೆ. ಶಿವಗುಡಿಯಿಂದ ಮರಳಿ ಬಂದಂತಹ ರೈತ ಮತ್ತು ಜಲಗಾರನ ಸಂವಾದವು ವೈಚಾರಿಕತೆಯ ಬೆಳಕನ್ನು ತೋರುತ್ತದೆ.

*"ಜೋಯಿಸರು*
*ಗುಡಿಯ ನುಗ್ಗುವ ಮುನ್ನ ಶಿವನ ಹೊರಗಟ್ಟಿ ನುಗ್ಗುವರು*
*ಶಿವಶಿವ ಗುಡಿಯೊಳಿದ್ದರು ಕೂಡ*
*ದೇವರಿಂದಲೆ ದೂರವಿಹ ಪಾಪಿಯೆಂಥವನು?"*[5]

ಗುಡಿಯೊಳಿದ್ದೂ ಸಹ ಆತನ ಸಾನ್ನಿದ್ಯವನ್ನು ಕಾಣಲರಿಯದೇ ಶೋಷಣೆಯನ್ನು ಮೆರೆದು ಶೂದ್ರರನು ಹೀನಾಯವಾಗಿ ನಡೆಸಿಕೊಳ್ಳುವ ಪುರೋಹಿತಶಾಹಿಗಳ ಸಣ್ಣತನವು ಇಲ್ಲಿ ಅನಾವರಣವಾಗಿದೆ. ಕಡೆಯಲ್ಲಿ ಜಲಗಾರನ ಕಾಯಕನಿಷ್ಠೆಗೆ ಒಲಿದು ಬಂದಂತಹ ಶಿವ ಊರ ಜಲಗಾರ ನೀನು, ಜಗದ ಜಲಗಾರ ನಾನು ಎಂದು ಆತನನ್ನು ಆಲಂಗಿಸುವುದು ಕಾಯಕನಿಷ್ಠೆಗೆ ಮತ್ತು ಭಕ್ತಿಯ ಪರಾಕಾಷ್ಠೆಗೆ ಸಾಕ್ಷಿಯಾಗಿದೆ. ಈ ನಾಟಕವು ದೇವರ ಪರಿಕಲ್ಪನೆ ಎನ್ನುವಂಥದ್ದು ಮನಸ್ಸಿನ ನಿರ್ಮಲ ಆಲೋಚನೆಯೇ ವಿನಃ ಗುಡಿಗೋಪುರಗಳಲ್ಲಿ ಹುಡುಕುವ ಪ್ರಕ್ರಿಯೆಯಲ್ಲ ಎಂಬುದನ್ನು ಸಾಬೀತು ಮಾಡುತ್ತದೆ. 12ನೇ ಶತಮಾನದಲ್ಲಿ ಬಸವಣ್ಣನವರು ತಮ್ಮ ವಚನದಲ್ಲಿ

***"ಉಳ್ಳವರು ಶಿವಾಲಯ ಮಾಡಿಹರು,***

***ನಾನೇನ ಮಾಡುವೆ ಬಡವನಯ್ಯಾ***

***ಎನ್ನ ಕಾಲೇ ಕಂಬ, ದೇಹವೇ ದೇಗುಲ,***

***ಶಿರ ಹೊನ್ನ ಕಲಶವಯ್ಯಾ, ಕೂಡಲಸಂಗಮದೇವಾ ಕೇಳಯ್ಯಾ,***

***ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ."*** [6]

ದೇವಾಲಯೇ ಮುಖ್ಯ ಎನ್ನುವ ನಾಟಕದ ಇತರೆ ಪಾತ್ರಗಳಿಗೂ ಕಾಯಕವೇ ಮುಖ್ಯ ಎನ್ನುವ ಜಲಗಾರ ನಿಷ್ಠೆಯು ಶರಣರ ಚಿಂತನೆಯನ್ನು ಈ ಸಂದರ್ಭದಲ್ಲಿ ನೆನಪಿಸುತ್ತದೆ. ಗುಡಿ ಸಂಸ್ಕೃತಿಗಿಂತ ಗುಡಿಸಲಿನಲ್ಲಿ ಸಂಸ್ಕಾರದಿಂದ ಬದುಕುವ ಬಡವನ ನಿಷ್ಠೆಯೇ ಶ್ರೇಷ್ಠ ಎಂಬುದನ್ನು ನಾವು ವಚನಕಾರರಲ್ಲಿ ಮನಗಂಡಿದ್ದೇವೆ. "ಹಿಂದೂ ವೈದಿಕ ಧರ್ಮದ ವರ್ಣಾಶ್ರಮ, ಜಾತಿಪದ್ಧತಿ, ಪುನರ್ಜನ್ಮ, ಕರ್ಮ(ವಿಧಿ) ಇವುಗಳೆಲ್ಲವನ್ನು ನಿರಾಕರಿಸಿ ಆಧ್ಯಾತ್ಮಿಕ ಕ್ಷೇತ್ರಕ್ಕೂ ಜನ ಸಮುದಾಯದ ಧರ್ಮಕ್ಕೂ ಹೊಸ ಸತ್ಯವನ್ನು ವಚನಕಾರರು ಪ್ರತಿಪಾದಿಸಿದರು. ಜಂಗಮ ದಾಸೋಹ ಮಾಡಿ ಕರ್ಮಯೋಗವ ಕಳೆದು, ಶಿವಯೋಗ ಮಾರ್ಗವನ್ನು ಹಿಡಿಯಬೇಕೆಂಬದು ವಚನ ಚಳುವಳಿಯ ತಾತ್ವಿಕ ಚಿಂತನೆಯಾಗಿತ್ತು. ಈ ಬಗೆಯ ಚಿಂತನೆಯನ್ನು ಜಲಗಾರ ನಾಟಕವು ಮುಖ್ಯ ಕೇಂದ್ರವಾಗಿರಿಸಿಕೊಂಡಿದೆ. ಕುವೆಂಪು ಕರ್ಮವನ್ನು ಕರ್ತವ್ಯ, ಕ್ರಿಯೆ ಎಂಬ ಅರ್ಥದಲ್ಲಿ ಬಳಸಿದ್ದಾರೆ."[7] ಇವತ್ತಿಗೂ ಎಷ್ಟೋ ಜನ ಮೌಢ್ಯತೆಗೆ ದಾಸರಾಗಿ ತಾವು ಮಾಡುವ ಕಾಯಕದ ಮೇಲೆ ನಂಬಿಕೆ ಇರಿಸಿಕೊಳ್ಳದೇ, ಪುರೋಹಿತಶಾಹಿಗಳ ಮಾತಿಗೆ ಮರುಳಾಗುತ್ತಿರುವುದನ್ನು ಕಾಣುತ್ತೇವೆ. ಇಂತಹ ಅನಾಚಾರಗಳು ತೊಲಗುವಂತಾಗಲು ಕುವೆಂಪು ಅವರ ನಾಟಕಗಳು ಪ್ರೇರಣೆಯಾಗಿವೆ.

ಯಾವ ಶೂದ್ರನನ್ನು ಸಮಾಜ ನಿಕೃಷ್ಟವಾಗಿ ಕಂಡರೂ ತದನಂತರ ಆ ಪಾತ್ರ ದೈವತ್ವಕ್ಕೇರಿತೋ ಅಂತದ್ದೇ ಪಾತ್ರವು ಶೂದ್ರತಪಸ್ವಿ ನಾಟಕದಲ್ಲಿ ಮೂಡಿಬಂದಿದೆ. ತಪಸ್ಸು, ಧ್ಯಾನ, ವೇದಾಧ್ಯಯನ ಇದೆಲ್ಲವೂ ಮೇಲ್ವರ್ಗದವರಿಗೆ ಮೀಸಲಾಗಿದ್ದ ಪ್ರಕ್ರಿಯೆ ಎಂಬಂತೆ ಇದ್ದ ಕಾಲಘಟ್ಟದಲ್ಲಿ ಶೂದ್ರನಾದ ಶಂಬೂಕನು ರಾಮರಾಜ್ಯದಲ್ಲಿ ತಪಸ್ಸಿಗೆ ಕುಳಿತದ್ದರಿಂದ ಬ್ರಾಹ್ಮಣನ ಮಗ ಸಾವಿಗೀಡಾದನೆಂಬುದು ಎಲ್ಲೆಡೆ ಹರಡಿ, ಶೂದ್ರನೊಬ್ಬ ತಪಸ್ಸು ಮಾಡುವುದೇ ಮಹಾಪಾಪವೆಂದು ಬಿಂಬಿಸಿ, ರಾಮನ ಕಡೆಯಿಂದ ಬಾಣ ಪ್ರಯೋಗ ಮಾಡಿಸಿ ಕೊಲ್ಲಿಸುವ ಪ್ರಸಂಗ ಮೂಲರಾಮಾಯಣದಲ್ಲಿದೆ. ಇಲ್ಲಿಯೂ ಅಂತೆಯೇ ಕುವೆಂಪು ಅವರು ಅಲ್ಪ ಮಾರ್ಪಾಡಿನೊಂದಿಗೆ ಯಾವ ಪಾತ್ರವು ಅಲಕ್ಷ್ಯಕ್ಕೆ ಒಳಗಾಗಿತ್ತೋ, ಯಾವ ರಾಮನು ಅದೇ ಶಂಬೂಕನನ್ನು ಕೊಂದು ಅಪವಾದಕ್ಕೆ ಗುರಿಯಾಗಿದ್ದನೋ, ಈ ಸಂಗತಿಯೆಲ್ಲವನ್ನೂ ಅರಿತುಕೊಂಡು, ನಾಟಕಕ್ಕೆ ಮರುರೂಪ ನೀಡಿದ್ದಾರೆ ಕುವೆಂಪು ಅವರು.

ಶೂದ್ರತಪಸ್ವಿ ನಾಟಕದಲ್ಲಿ ಶಂಬೂಕನ ತಪಸ್ಸಿನಿಂದ ಬ್ರಾಹ್ಮಣನ ಮಗ ಸಾವಿಗೀಡಾಗಿದ್ದಾನೆ ಎಂದು ಭಾವಿಸಿದ ಬ್ರಾಹ್ಮಣ ತನ್ನ ಅಹವಾಲನ್ನು ರಾಮನ ಬಳಿಗೆ ತಂದಾಗ, ವೃದ್ಧ ಬ್ರಾಹ್ಮಣನನ್ನು ಶಂಬೂಕನ ಆಶ್ರಮಕ್ಕೆ ಕರೆದುಕೊಂಡು ಹೋಗುತ್ತಾನೆ. ಆತನ ಸೂಚನೆಯಂತೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವ ಮೊದಲೇ ಶ್ರೀರಾಮನು ಬ್ರಹ್ಮಾಸ್ತ್ರಕ್ಕೆ ನಮಸ್ಕರಿಸುವಂತೆ ನೆಪಮಾಡಿ ಶಂಬೂಕನಿಗೆ ನಮಸ್ಕರಿಸುತ್ತಾನೆ. "ಅರಸಿ ಕೊಲ್

ಅರಗುಲಿಯನ್"[8] ಎಂದು ಬಾಣ ಪ್ರಯೋಗಿಸುತ್ತಾನೆ. ಆದರೆ ಆ ಬ್ರಹ್ಮಾಸ್ತ್ರ ಶಂಬೂಕನಿಗೆ ನಮಸ್ಕರಿಸಿ ಬ್ರಾಹ್ಮಣನ ಮೇಲೆರಗುತ್ತದೆ. ಆ ಸಂದರ್ಭದಲ್ಲಿ ಬ್ರಾಹ್ಮಣ ರಾಮನಲ್ಲಿ ಕಾಪಾಡುವಂತೆ ಪರಿಪರಿಯಾಗಿ ಬೇಡಿಕೊಳ್ಳುತ್ತಾನೆ.

***"ಬೋಧಮಾಯ್ತೆನಗೀಗಳ್ ಮಹಾಪ್ರಾಜ್ಞ,***
***ಬುದ್ಧಿಗಲಿಸಿದಯ್ ಸಂಪ್ರದಾಯಬದ್ಧಂಗೆ,***
***ಶಾಸ್ತ್ರಸಂಮೂಡಂಗೆ, ಜಾತಿ ಗರ್ವಾಂಧಂಗೆ***
***ಆವ ಜಾತಿಯ ತರವೋ? ಇಂಧನಕೆ ಹೊರತಂದೆ***
***ಬೆಂಕಿಗೇಂ ಭೇದಮೇ? ಹಳ್ಳುರಿಗೆ ದಾಕ್ಷಿಣ್ಯವೇ?***
***ಆರಾದರೇನ್? ಆರಾಧ್ಯರ್ ತಪೋಧನರ್***
***ನಮಸ್ಕಾರಮೇ ಪುಣ್ಯಂ ತಿರಸ್ಕಾರಮೆ ಪಾಪಂ"***[9]

ನಾಟಕದ ಕೊನೆಯಲ್ಲಿ ಬ್ರಾಹ್ಮಣನು ಶಂಬೂಕ ಋಷಿಗೆ ಶರಣಾಗತನಾದ ಮೇಲೆ ಆತನ ಮಗ ಮತ್ತೆ ಜೀವಿಸಿ ಬರುತ್ತಾನೆ. ಆ ಮೂಲಕ ಪುರೋಹಿತಶಾಹಿತನದ ಶ್ರೇಷ್ಠತೆ ಎಂಬ ವ್ಯಸನವನ್ನು ಹೋಗಲಾಡಿಸುವ ಪ್ರಯತ್ನವನ್ನು ಈ ನಾಟಕದಲ್ಲಿ ಕುವೆಂಪು ಅವರು ಮಾಡಿದ್ದಾರೆ.

ಬೆರಳ್‌ಗೆ ಕೊರಳ್ ನಾಟಕವು ಏಕಲವ್ಯನ ಗುರುಭಕ್ತಿಯನ್ನು, ದ್ರೋಣಾಚಾರ್ಯರು ಅರ್ಜುನನ ಮೇಲಿರಿಸಿಕೊಂಡಿರುವ ನಿಷ್ಠೆಯನ್ನು ತೋರುತ್ತದೆ. ಅಂದರೆ ಪ್ರಭುತ್ವವು ಹೇಗೆ ಸಾಮಾನ್ಯ ಜನರನ್ನು ತುಳಿಯುತ್ತದೆ ಎಂಬುದಕ್ಕೆ ಈ ನಾಟಕ ಉದಾಹರಣೆಯಾಗಿದೆ. ಪ್ರಭುತ್ವದಲ್ಲಿ ಮೆರೆಯುತ್ತಿದ್ದ ಅರ್ಜುನನಷ್ಟೇ ಪ್ರಾವೀಣ್ಯತೆಯನ್ನು ಬಿಲ್ವಿದ್ಯೆಯಲ್ಲಿ ಗಳಿಸಿದ ಏಕಲವ್ಯನನ್ನು, ಆತನ ಪ್ರತಿಭೆಯನ್ನು ಬೆಳೆಯಗೊಡದೇ ಚಿವುಟಿ ಹಾಕಲು ಪ್ರಯತ್ನಿಸಿದುದು ತನ್ನದೇ ಗುರುವಿನ ಮೂಲಕ ಎಂಬುದು ದುಃಖದ ಸಂಗತಿ. "ಪುರೋಹಿತನಿಗೆ ಒಂದು ನಿಯಮ, ಶೂದ್ರನಿಗೆ ಮತ್ತೊಂದು ನಿಯಮದ ತಾರತಮ್ಯದ ಪುರೋಹಿತ ಶಕ್ತಿಯಿಂದಲೇ ಏಕಲವ್ಯನನ್ನು ನಿಸ್ತೇಜಗೊಳಿಸುವ ಸಾಮ್ರಾಜ್ಯ ಶಕ್ತಿಗಳ ತಂತ್ರವಾಗಿದೆ ಇದು. ಶೂದ್ರನೊಬ್ಬ ಸಾಂಪ್ರದಾಯಿಕ ನಿಯಮಗಳನ್ನು ಮೀರಿದರೆ ಅದಕ್ಕೆ ತಮ್ಮ ಹಕ್ಕುಗಳನ್ನು ಪ್ರತಿಷ್ಠಾಪಿಸಲು ರಾಜಪ್ರಭುತ್ವದ ಬೆಂಬಲದಿಂದ ಶಿಕ್ಷೆ ವಿಧಿಸುವ ಮಾದರಿಗೆ ಈ ಘಟನೆ ಒಂದು ಉದಾಹರಣೆ. ಏಕಲವ್ಯನ ಕಾಲಕ್ಕೆ ಪುರೋಹಿತವರ್ಗ ಶಸ್ತ್ರಗಳನ್ನು ಹಿಡಿಯುವ, ರಾಜತಂತ್ರಗಳನ್ನು ರೂಪಿಸುವ ಯುದ್ಧಕಲೆಯನ್ನು ಕರಗತ ಮಾಡಿಕೊಳ್ಳುವ ಹಂತ ವಿಕಾಸಗೊಂಡು ಶೂದ್ರವರ್ಗದ ಹಕ್ಕುಗಳನ್ನು ದಮನಗೊಳಿಸುವ ಹಂತವನ್ನು ತಲುಪಿದ್ದಕ್ಕೆ ಸಾಕ್ಷಿಯಂತಿದೆ. ಬೆರಳ್‌ಗೆ ಕೊರಳ್ ಪ್ರಸಂಗ. ದ್ರೋಣ ವರ್ಣ ವ್ಯವಸ್ಥೆಯ ಮಧ್ಯೆಯೂ ಬದಲಾವಣೆಗೆ ಒಳಗಾದರೂ ಸಾಮ್ರಾಜ್ಯಶಾಹಿ ಶಕ್ತಿಗಳ ಅಸೂಯಾಗ್ನಿ ಅದಕ್ಕೆ ಅವಕಾಶ ಕಲ್ಪಿಸದ ಈ ನಾಟಕದ ಘಟನೆಗಳು ವರ್ಣ–ವರ್ಗಗಳ ಸಂಘರ್ಷವನ್ನೆ ಕಟ್ಟಿಕೊಡುತ್ತದೆ."[10] ಸಾಮರಸ್ಯಕ್ಕೆ ಸಾಕ್ಷಿಯಾಗಬೇಕಾಗಿದ್ದ, ಯಾವ ಹಿನ್ನೆಲೆಯೂ ಇಲ್ಲದಲೇ ಶೂದ್ರನೊಬ್ಬ ಬಿಲ್ವಿದ್ಯೆಯಲ್ಲಿ ಪ್ರವೀಣನಾದುದನ್ನು ಕಂಡು ಸಂಭ್ರಮಿಸಬೇಕಾಗಿದ್ದು ಗುರು ಮತ್ತು ಪ್ರಭುತ್ವದ ವ್ಯವಸ್ಥೆ ಆತನನ್ನು ನಾಶಗೊಳಿಸಿದ ಪರಿ ನಿಜಕ್ಕೂ ಹೇಯಕರವೆನ್ನಿಸುತ್ತದೆ. ಕೆಲವೆಡೆಯಲ್ಲಿ ಕಲಿಸಲು

ಒಪ್ಪಿಗೆ ಸೂಚಿಸುವ ಗುರುಗಳ ಮಾತು ಪ್ರಗತಿದಾಯಕವೆನ್ನಿಸಿದರೂ ಅದೇ ಕ್ಷಣದಲ್ಲಿ ಎದುರಾಗುವ ಪ್ರಭುತ್ವದ ವಿರೋಧವು ಆ ಸಂದರ್ಭದಲ್ಲಿದ್ದ ಮಿತಿಗಳನ್ನು ತಿಳಿಸುತ್ತದೆ.

ಗುರುವಿನ ನೇರ ಕಲಿಕೆಯಿಲ್ಲದೇ ಪರೋಕ್ಷವಾಗಿ ಬಿಲ್ವಿದ್ಯೆ ಕಲಿತ ಏಕಲವ್ಯನನ್ನು ದ್ರೋಣರು ಕಾಣಿಕೆಯಾಗಿ ಹೆಬ್ಬೆರಳನ್ನು ಕೇಳಿದಾಗ ಮರುಮಾತನಾಡದೇ ಕತ್ತರಿಸಿಕೊಟ್ಟುದು ಆತನ ಗುರುಭಕ್ತಿಯನ್ನು ಪ್ರದರ್ಶಿಸುತ್ತದೆ. ಆದರೆ ಗುರುವಾದವನು ಅದಕ್ಕೆ ಯೋಗ್ಯನಲ್ಲನೆಂಬುದು ಈ ಸಂದರ್ಭದಲ್ಲಿ ತಿಳಿದುಬರುತ್ತದೆ. ಇದೇ ಸಂದರ್ಭದಲ್ಲಿ ಏಕಲವ್ಯನ ತಾಯಿ ದ್ರೋಣರಿಗೆ ತಕ್ಕ ಶಾಪವನ್ನು ಹಾಕುತ್ತಾಳೆ.

***"ಆಗೋ‌ಳ್ ಬಲಿ ನನ್ನ ಕಂದನ ಬೆರಳ್***
***ಬಲಿಯಕ್ಕೆ ಆ ಪಾಪಿಯ ಕೊರಳ್"***[11]

ತಾಯಿಯ ಈ ಶಾಪದಂತೆ ದ್ರೋಣಾಚಾರ್ಯರು ಯಾವ ಶಿಷ್ಯೋತ್ತಮನ ಸೃಷ್ಟಿಗಾಗಿ ಶ್ರಮಿಸಿದ್ದರೋ ಆತನಿಂದಲೇ ಹತರಾಗುತ್ತಾರೆ. ಜ್ಞಾನವೆಂಬುದು ಶ್ರಮಿಕನ ಸ್ವತ್ತೇ ಹೊರತು ಯಾವುದೇ ಮೇಲ್ವರ್ಗದವರ ಸ್ವತ್ತಲ್ಲ ಎಂಬ ಸ್ಪಷ್ಟ ಸಂದೇಶವನ್ನು ಕುವೆಂಪು ಅವರು ಈ ನಾಟಕದ ಮೂಲಕ ನೀಡಿದ್ದಾರೆ. ಅಂತೆಯೇ ಅಧರ್ಮದ ಮಾರ್ಗದಲ್ಲಿ ನಡೆದವರು ಶಿಕ್ಷೆಗೆ ಗುರಿಯಾಗುತ್ತಾರೆಂಬುದೂ ಸಹ ಇಲ್ಲಿ ಸ್ಪಷ್ಟವಾಗುತ್ತದೆ.

ಪುರೋಹಿತಶಾಹಿಯ ದೌರ್ಜನ್ಯವನ್ನು ಖಂಡಿಸುವ ಪ್ರಕ್ರಿಯೆ ಕುವೆಂಪು ಅವರ ಕಾನೀನ ನಾಟಕದ ಮೂಲಕ ಮತ್ತೆ ಮುಂದುವರಿಯುತ್ತದೆ. ಮೂಲ ಮಹಾಭಾರತದಲ್ಲಿ ವೇಷ ಮರೆಸಿಕೊಂಡು ಬಿಲ್ವಿದ್ಯೆ ಕಲಿತ ಕಾರಣ ಕರ್ಣ ಗುರುವಿನ ಶಾಪಕ್ಕೆ ಗುರಿಯಾಗಬೇಕಾಗುತ್ತದೆ. ಆದರೆ ಈ ನಾಟಕದಲ್ಲಿ ಕರ್ಣನು ತನ್ನ ಅಸ್ಥಿತ್ವವನ್ನು ಮರೆಮಾಚಿಕೊಳ್ಳುವುದಿಲ್ಲ. ಬದಲಿಗೆ ತನ್ನ ಗುರುತನ್ನು ಗುರುವಿನ ಮುಂದೆ ಧೈರ್ಯವಾಗಿ ಹೇಳಿಕೊಳ್ಳುತ್ತಾನೆ. ಬಹುಶಃ ಈ ಸಂಗತಿ ಯಾರೂ ಕೂಡಾ ಹುಟ್ಟಿನಿಂದ ಕೀಳಲ್ಲ ಎಂಬ ತತ್ವವನ್ನು ಪ್ರತಿಪಾದಿಸುತ್ತದೆ. ಕರ್ಣನು ತನ್ನ ಸಾಮರ್ಥ್ಯದಿಂದಲೇ ತನಗೇ ಬೇಕಾದುದೆಲ್ಲವನ್ನೂ ಪಡೆದುಕೊಳ್ಳುತ್ತಾನೆ.

***ನಾನು ಬ್ರಾಹ್ಮಣನಲ್ಲ !***
***ನಾನು ಕ್ಷತ್ರಿಯನೂ ಅಲ್ಲ !***
***ನಾನು ಬೆಸ್ತರ ಕುಲದವನು !*** [12]

ಗುರುಗಳಾದ ಪರಶುರಾಮರೂ ಕೂಡಾ ಕರ್ಣನ ನೇರನುಡಿಗೆ, ಆತನ ಧೈರ್ಯಕ್ಕೆ ಮೆಚ್ಚಿ ಅವನನ್ನು ಶಪಿಸುವುದರ ಬದಲು ಆವರಿಗೆ ವರವನ್ನೀಯುತ್ತಾರೆ. ಆ ಮೂಲಕ ಮೂಲ ಕಥೆಯಲ್ಲಿ ಆಗಿದ್ದಂತಹ ತೊಡಕನ್ನು ಕುವೆಂಪು ಇಲ್ಲಿ ಸರಿಪಡಿಸುತ್ತಾರೆ. ಅದಲ್ಲದೇ ತಮ್ಮದೇ ಮಾತುಗಳಲ್ಲಿ "ಕುಲ ಜನನದೊಳಿಲ್ಲ ಗುಣದೊಳಿಹುದು"[13] ಎನ್ನುತ್ತಾರೆ. ಮೂಲದಲ್ಲಿ ಕುಲದ ವಿಚಾರವಾಗಿ ಕರ್ಣನನ್ನು ಜರಿದಿದ್ದ ಭೀಷ್ಮಾಚಾರ್ಯರೂ ಸಹ ಈ ನಾಟಕದಲ್ಲಿ ಪರಶುರಾಮನ ನಡೆಯನ್ನು ಬೆಂಬಲಿಸುತ್ತಾ "ವೀರನರಿಯನೆ ವೀರನಾರೆಂಬುದನು"[14] ಎಂದು ಹೇಳಿ ತಾವು ಇಲ್ಲಿ ಎತ್ತರಕ್ಕೇರಿದ್ದಾರೆ.

ಒಟ್ಟಾರೆಯಾಗಿ ಕುವೆಂಪು ಅವರ ಈ ನಾಲ್ಕು ನಾಟಕಗಳಲ್ಲಿ ಕಂಡು ಬಂದಂತಹ ಪ್ರಮುಖ ಅಂಶವೆಂದರೆ, ಶೂದ್ರರನ್ನು ತುಳಿಯುವ ಪ್ರಕ್ರಿಯೆ ಮತ್ತು ಪುರೋಹಿತಶಾಹಿಗಳ ಮೇಲ್ಪಂಕ್ತಿ, ಅಂತೆಯೇ ಈ

ನಾಟಕಗಳು ಜಾತಿ ವ್ಯವಸ್ಥೆಗೆ ಸವಾಲಾಗಿ ನಿಂತಿವೆ. ಎಲ್ಲಿ ಹುಟ್ಟುತ್ತೇವೆ ಎಂಬುದು ಮುಖ್ಯವಲ್ಲ, ಬದಲಿಗೆ ಏನನ್ನು ಸಾಧಿಸಲು ಹೊರಟಿದ್ದೇವೆ ಎಂಬುದೇ ಮುಖ್ಯ ಎಂಬ ಸಂದೇಶವನ್ನು ಈ ನಾಟಕಗಳು ಒಳಗೊಂಡಿವೆ. ಯಾರನ್ನು ಕಡೆಗಣಿಸಲಾಗಿತ್ತೋ ಅದೇ ವ್ಯಕ್ತಿ ಕಡೆಯಲ್ಲಿ ಪೂಜನೆಗೆ ಒಳಗಾಗಿದ್ದಾನೆ. ಯಾವ ವ್ಯಕ್ತಿಗಳು ತಿರಸ್ಕರಿಸಿದ್ದರೋ ಅವರಿಂದಲೇ ಮಾನ್ಯತೆಗೆ ಒಳಗಾದಂತಹ ಸಂಗತಿ, ಮೂಲದಲ್ಲಿ ಇದ್ದಂತಹ ಕೆಲವು ಲೋಪದೋಷಗಳನ್ನು ಒರೆಹಚ್ಚಿ ಅದನ್ನು ಪ್ರಸ್ತುತ ಕಾಲಘಟ್ಟಕ್ಕೆ ಅನ್ವಯಿಸಿ, ಹೊಸ ಮನ್ವಂತರಕ್ಕೆ ಕಾರಣವಾಗಿರವುದು ಸಹ ಈ ನಾಟಕಗಳ ಒಂದು ಉತ್ತಮವಾದ ಹೆಜ್ಜೆ ಎಂದು ಗುರುತಿಸಬಹುದು.

**ಕೊನೆಟಿಪ್ಪಣಿಗಳು**

1. ಶಿವಾರೆಡ್ಡಿ. ಕೆ.ಸಿ. *ಕುವೆಂಪು ಸಮಗ್ರ ನಾಟಕ.* ಪುಟ. ಸಂಪಾದಕರ ಮಾತು
2. ಕುವೆಂಪು. *ವಿಚಾರಕ್ರಾಂತಿಗೆ ಆಹ್ವಾನ.* ಪು.ಸಂ. 49
3. ಕುವೆಂಪು. *ಜಲಗಾರ.* ಪುಟ. 7–8
4. ಅದೇ. ಪುಟ. 7–8
5. ಅದೇ. ಪುಟ. 18–19
6. *ಸಮಗ್ರ ವಚನ ಸಂಪುಟ* – 1, ವ.ಸಂ : 821
7. ವೆಂಕಟೇಶಮೂರ್ತಿ ಟಿ. *ಕನ್ನಡ ನಾಟಕ ಯಜಮಾನ್ಯ ಸಂಕಥನ.* ಪುಟ. 102
8. ಕರ್ನಾಟಕ ಸಾಹಿತ್ಯ ಪರಿಷತ್ತು. *ಕುವೆಂಪು ಅವರ ಮೂರು ನಾಟಕಗಳು.* ಪುಟ. 60
9. ಅದೇ. ಪುಟ. 63
10. ಶಿವಾರೆಡ್ಡಿ. ಕೆ.ಸಿ. *ಪೂರ್ವೋಕ್ತ*–1
11. ಕುವೆಂಪು. *ಬೆರಳ್‌ಗೆ ಕೊರಳ್,* ಪುಟ. 46
12. ಕುವೆಂಪು. *ಕಾನೀನ.* ಪುಟ. 16
13. ಅದೇ. ಪುಟ. 16
14. ಅದೇ. ಪುಟ. 23

**ಪರಾಮರ್ಶನ ಗ್ರಂಥಗಳು**


- ದೇಜಗೌ. (1971). *ಕುವೆಂಪು ಸಾಹಿತ್ಯ ಕೆಲವು ಅಧ್ಯಯನಗಳು.* ಕರ್ನಾಟಕ ಸಹಕಾರಿ ಪ್ರಕಾಶನ.
- ಕುವೆಂಪು. (2017). *ಕುವೆಂಪು ಸಮಗ್ರ ನಾಟಕ.* ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ(ರಿ).
- ಕುವೆಂಪು. (2010). *ವಿಚಾರ ಕ್ರಾಂತಿಗೆ ಆಹ್ವಾನ.* ಕನ್ನಡ ಸಂಸ್ಕೃತಿ ಇಲಾಖೆ.

- ಮಳಲಿ ವಸಂತಕುಮಾರ. (1995). *ಕುವೆಂಪು ಅವರ ನಾಟಕಗಳು ಒಂದು ಅಧ್ಯಯನ.* ಪಂಪ ಪ್ರಕಾಶನ.
- ನಾಗಭೂಷಣ ಡಿ.ಎಸ್. (ಸಂ.) (2005). ಕುವೆಂಪು ಪುನರನ್ವೇಷಣೆ. ಲೋಹಿಯಾ ಪ್ರಕಾಶನ.
- ಪರಮೇಶ್ವರ ಭಟ್ಟ, ಎಸ್.ವಿ. (1976). *ರಸಋಷಿ ಕುವೆಂಪು. ಸಂಪುಟ–1.* ಪ್ರಸಾರಂಗ ಮೈಸೂರು ವಿಶ್ವವಿದ್ಯಾನಿಲಯ.